**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 1394/2021**

**ಫ್ರಾಸಾ:- 4 ಚಾಸಾ:- 2**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ರಂಗಣ್ಣ |
| ವಯಸ್ಸು | : | 32 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ:- 6.1.2025**

**ಮುಖ್ಯ ವಿಚಾರಣೆ: ವಿಶೇಷ ಅಭಿಯೋಜಕರಿಂದ**

1. ಚಾಸಾ 1 ಮತ್ತು 3 ರವರು ಗೊತ್ತು. ಈ ಪ್ರಕರಣದಲ್ಲಿ ಪೋಲೀಸರು ನನ್ನನ್ನು ಪಂಚನಾಮೆ ಮಾಡಲು ದಿ: 13-9-2021 ರಂದು ಕರೆಸಿದ್ದರು. ಪೋಲೀಸರು ಗಾಂಧಿನಗರ ಪಾರ್ಕ್ ಬಳಿ ಇರುವ ಹೌಸಿಂಗ್ ಬೋರ್ಡ್ ಏರಿಯಾದಲ್ಲಿ ಪಂಚನಾಮೆಯನ್ನು ಸಂಜೆ 4-00 ಗರಿಂದ 5-30 ರವರೆಗೆ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ 1 ನೇ ಆರೋಪಿ ಮತ್ತು ಚಾಸಾ 1 ರವರ ನಡುವೆ ಗಲಾಟೆಯಾಗಿರುತ್ತದೆ ಎಂದು ಪಂಚನಾಮೆ ಮಾಡಿರುತ್ತಾರೆ. ಸದರಿ ಗಲಾಟೆಯು ಗಣಪತಿಯ ಹಬ್ಬದ ಊಟದ ವಿಚಾರವಾಗಿ ಆಗಿರುತ್ತದೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದಾಗಿ ಹೇಳಿರುತ್ತಾರೆ. ನಿಪಿ-5 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ ಆರ್ ಬಿ ಮತ್ತುಎ ಸ್ ಆರ್ ಪಿ ವಕೀಲರಿಂದಃ**

2. 13-9-2021 ರಲ್ಲಿ ನಾನು ಸೋಲಾರ್ ಸೇಲ್ಸ್ ಎಕ್ಸ್‌ಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದೆನು. ನಾನು ಬಳ್ಳಾರಿಯ ವ್ಯಾಪ್ತಿಯಲ್ಲಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದೆನು. ನನ್ನ ಕೆಲಸದ ಅವಧಿಯು ಬೆಳಿಗ್ಗೆ 9-30 ರಿಂದ ಸಂಜೆ 6-00 ಗಂಟೆವರಗೆ. ನನ್ನದು ಮಾರುಕಟ್ಟೆಯಲ್ಲಿ ಫೀಲ್ಡ್ ವರ್ಕ್ ಇರುತ್ತದೆ. ಚಾಸಾ 1, 7 ಮತ್ತು 8 ರವರು ನನ್ನ ಸ್ನೇಹಿತರು ಎಂದರೆ ಸರಿ. ನಾನು ಮಾರುಕಟ್ಟೆಯಲ್ಲಿ ತಿರುಗಾಡುತ್ತಿರುವುದರಿಂದ ಪಂಚನಾಮೆ ಮಾಡಲು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 4-30 ರಿಂದ 5-30 ರವರೆಗೆ ಮಾಡಿರುತ್ತಾರೆ. ಚಾಸಾ 1, 7 ಮತ್ತು 8 ರವರು ನನ್ನ ಸ್ನೇಹಿತರಾಗಿದ್ದರಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ. ಸರಿ ಇದೆ.**

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 1394/2021**

**ಫಿಪ್ರಾಸಾಃ- 5 ಚಾಸಾಃ- 7**

| | | |
|---|---|---|
| ಸಾಕ್ಷಿಯ ಹೆಸರು | : | ಕೌಶಿಕ್ |
| ತಂದೆಯ ಹೆಸರು | : | ಪಂಪನಗೌಡ |
| ವಯಸ್ಸು | : | 22 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 6.1.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನನಗೆ ಚಾಸಾ 1, 8 ರವರು ಗೊತ್ತು. ಚಾಸಾ 9 ರಿಂದ 11 ರವರು ಗೊತ್ತಿಲ್ಲ. ಆರೋಪಿತರನ್ನು ನಾನು ನೋಡಿರುತ್ತೇನೆ ಅವರು ಕೆಇಬಿ ಹತ್ತಿರ ಇರುತ್ತಾರೆ ಆದರೆ ಅವರುಗಳ ಹೆಸರು ನನಗೆ ಗೊತ್ತಿಲ್ಲ. 2021 ರಲ್ಲಿ ನನ್ನ ಸ್ನೇಹಿತರು ನಮ್ಮ ಏರಿಯಾ ಹುಡುಗರು ಗಣಪತಿಯನ್ನು ಕೂಡಿಸಿದ್ದರು, ಅದನ್ನು ಕಳುಹಿಸಿ ಕೊಡುವ ಕಾಲಕ್ಕೆ ನನ್ನ ಪೋನ್‌ನಿಂದ ಡಿಜೆ ಹಾಡುಗಳನ್ನು ಹಚ್ಚಿದ್ದು ಅದನ್ನು ಯಾರೋ ತೆಗೆದುಕೊಂಡು ಹೋಗಿದ್ದರು ಆಗ ನಮ್ಮ ಏರಿಯಾದ ಒಬ್ಬ ಹಿರಿಯರು ಪೋನ್ ಕೊಟ್ಟರು. ನಂತರ ಬನ್ನಿಕಟ್ಟೆ ಪಾರ್ಕ್ ಹತ್ತಿರ ಕೂಡಿಸಿದ ಗಣೇಶ್ ಹತ್ತಿರ ರಾತ್ರಿ 8-30 ಕ್ಕೆ ನಮ್ಮ ಗಣೇಶನನ್ನು ಬಿಟ್ಟು ಬಂದ ನಂತರ ಆರೊಪಿತರು ನನ್ನನ್ನು ಸೈಡ್‌ಗೆ ಕರೆದು ಮಾತನಾಡಿಸಿದರು. ಆಗ ಚಾಸಾ 1 ಮತ್ತು 8 ರವರು ಏನಾಯಿತು ಎಂದು ವಿಚಾರಿಸಿದರು. ನಂತರ ನಾನು ಅಲ್ಲಿಂದ ನಮ್ಮ ಮನೆಗೆ ಹೋಗಿರುತ್ತೇನೆ. ನಂತರ ಗಲಾಟೆಯಾಗಿರುತ್ತದೆ. ಯಾರು ಯಾರಿಗೆ ಏನು ಎಂದರು ಎಂದು ನನಗೆ ಗೊತ್ತಿಲ್ಲ. ಪೋಲೀಸರ ಮುಂದೆ 1 ನೇ ಆರೋಪಿಯು ಕೈಯಿಂದ ಹೊಡೆದ ಬಗ್ಗೆ ಹಾಗೂ ಚಾಸಾ 1 ಮತ್ತು 8 ರವರಿಗೆ ಜಾತಿನಿಂದನೆ ಮಾಡಿ ಬೈದ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

ಸಾಕ್ಷಿಗೆ ವೀಡಿಯೋ ಹೇಳಿಕೆಯನ್ನು ತೋರಿಸಲಾಗಿ ಪೋಲೀಸರು ಹೇಳಿಕೊಟ್ಟಂತೆ ನಾನು ಈಗ ನೋಡುತ್ತಿರುವ ವೀಡಿಯೋದಲ್ಲಿ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2 ದಿಃ 14-9-2021 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂರದೆ ಸರಿಯಲ್ಲ. ದಿಃ 12-9-2021 ರಂದು ನಾನು ಟ್ಯಾಂಕ್ ಸ್ಕೂಲ್ ಹತ್ತಿರ ಗಣೇಶ್ ಕೂಡಿಸಿದ್ದೆವು ಎಂದರೆ ಸರಿಯಲ್ಲ. ನಾವು ಸದರಿ ಗಣೇಶನನ್ನು ಬಿಡಲು ಮೂರನೇ ದಿನಕ್ಕೆ ಕೆನಾಲ್ ಗೆ ಬಿಡಲು ಹೊರಟಿದೆದವು ಎಂರದೆ ಸರಿಯಲ್ಲ. ಆಗ 1 ನೇ ಆರೋಪಿಯು ಸದರಿ ಗಣೇಶನನ್ನು ನಮ್ಮ ಓಣಿಯಲ್ಲಿ ತೆಗೆದುಕೊಂಡು ಹೋಗಲು ತಿಳಿಸಿದ್ದ ಎಂದರೆ ಸರಿಯಲ್ಲ. ಆದರೂ ಸಹ ನಮ್ಮ ಗಣೇಶನನ್ನು ಅವರಿಗೆ ಹೇಳಲಾರದೇ ಬಿಟ್ಟು ಬಂದಿದ್ದೆವು ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 10-00 ಗಂಟೆ ಸುಮಾರಿಗೆ ಚಾಸಾ 1 ರವರು ಕೂಡಿಸಿದ ಗಣೇಶ್ ಹತ್ತಿರ ಬಂದಿದ್ದೆವು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ನನಗೆ ಬಂದು ನಾವು ಹೇಳಿದ ಹಾಗೆ ಯಾಕೆ ಮಾಡಲಿಲ್ಲ ಎಂದು ಕೈಯಿಂದ ನನಗೆ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ 8 ರವರು ನನಗೆ ಹೊಡೆದಿದ್ದನ್ನು ವಿಚಾರಿಸಲಾಗಿ 1 ನೆ ಆರೋಪಿಯು ವಾಲ್ಮೀಕಿ ಸೂಳೆ ಮಕ್ಕಳೇ ಎಂದು ಚಾಸಾ 1 ಮತ್ತು 8 ರವರಿಗೆ ಬೈದನು ಎಂದರೆ ಸರಿಯಲ್ಲ. ನಾನು ಮನೆಗೆ ಹೋದ ನಂತರ ಆರೋಪಿತರೆಲ್ಲರೂ ಕಟ್ಟಿಗೆ ತೆಗೆದುಕೊಂಡು ಬಂದು ಚಾಸಾ 1, 6 ಮತ್ತು 8 ರವರ ಜೊತೆ ಕಟ್ಟಿಗೆ ತೆಗೆದುಕೊಂಡು ಬಂದು ಜಗಳ ಮಾಡಿದರು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-8 ಎಂದು, ವೀಡಿಯೋ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಘಟನೆಯ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ ಆರ್ ಬಿ ಮತ್ತುಎ ಸ್ ಆರ್ ಪಿ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ವಿನಂತಿಸಿಕೊಂಡಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.